ಸಿಸಿ ನಂಃ  2028/2025

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರಮೋದ | ಸಿ.ಡಬ್ಲೂ-5 |
| ತಂದೆಯ  ಹೆಸರು | : | ಗಿರೀಶ | ಪಿ.ಡಬ್ಲೂ-6 |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ಖಾಸಗಿ ಕೆಲಸ | |
| ವಾಸ ಸ್ಥಳ | : | ಹುಬ್ಬಳ್ಳಿ. | |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ **25-07-2026**

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

ಚಾಸಾ-4 ರವರ ಪರಿಚಯ ಇಲ್ಲ.  ದಿಃ 23-07-2025 ರಂದು ಸಂಚಾರ ಠಾಣೆಯ ಪೊಲೀಸರು  ಠಾಣೆಗೆ ನನಗೆ, ಚಾಸಾ-5 ರವರನ್ನು ಕರೆಯಿಸಿ ಪಂಚನಾಮೆಗೆ ಪಂಚರಾಗಿ ಆಗಲು ತಿಳಿಸಿ ನೋಟಿಸ್ಸ ಕೊಟ್ಟಿದ್ದಾರೆ. ಸಾಕ್ಷಿಯು ಸದರಿ ನೋಟಿಸ್ಸನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ. 12  ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.12  (ಬಿ) ಎಂದು ಗುರುತಿಸಲಾಯಿತು.  ಪೊಲೀಸರು  ನಮ್ಮ ಸಮಕ್ಷಮ ಒಂದು ಗೇರ ಇರುವ  ಮೋಟರ ಸೈಕಲನ್ನು ಮಧ್ಯಾಹ್ನ 2.15 ರಿಂದ 2.30  ರ ಸಮಯದಲ್ಲಿ ಪಂಚನಾಮೆ ಮೂಲಕ ಜಪ್ತಿ ಪಡಿಸಿಕೊಂಡಿದ್ದಾರೆ. ಸಾಕ್ಷಿಯು ಸದರಿ ಪಂಚನಾಮೆಯನ್ನು  ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.13  ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ.13  (ಬಿ) ಎಂದು ಗುರುತಿಸಲಾಯಿತು. ಜಪ್ತಿ ಪಡಿಸಿದ ವಾಹನದ 6 ಪೋಟೋಗಳನ್ನು ನಮ್ಮ ಸಮಕ್ಷಮ ತೆಗೆದುಕೊಡಿದ್ದಾರೆ. ಆ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.14 ರಿಂದ ನಿಪಿ.19 ಎಂದು ಗುರುತಿಸಲಾಗಿದೆ.

ಸಿಸಿ ನಂಃ 2028/2025

**ಪಾಟೀಸವಾಲು : ಆರೋಪಿ ಪರ ಕು. ಎಸ್ ಎಮ್ ಎಸ್ ವಕೀಲರಿಂದ**

ಅಪಘಾತದಲ್ಲಿ ಮೃತ ಪಟ್ಟ ಶ್ರೀಧರ ನನ್ನ ಸಂಬಂಧಿಕನಲ್ಲ. ಆ ದಿನ ಪೊಲೀಸರು ಜಪ್ತಿ ಪಡಿಸಿದ ಮೋಟರ ಸೈಕಲ ನಂಬರ ನೆನಪಿಲ್ಲ. ನನ್ನ ಮತ್ತು ಚಾಸಾ- 4 ರವರ ಸಮಕ್ಷಮ ನಿಪಿ.13 ರಂತೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.13 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ನಿಪಿ.13 ನ್ನು ಬರೆಯಲು ನಾನು ಮಾಹಿತಿ ನೀಡಿಲ್ಲ ಪೊಲೀಸರೇ ಬರೆದಿದ್ದಾರೆ. ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ನನಗೆ ವೈಯಕ್ತಿಕ ಮಾಹಿತಿ ಇಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ದಿ ನ್ಯಾಹಾಗೂ ಸಿಜೆಎಂ., ಧಾರವಾಡ.